ನಿಮ್ಮೊಡನೆ

# ಬಾಲ್ಯದ ಬಣ್ಣಗಳು ಕಳೆದು ಹೋದವೇ?

ಬೇಸಿಗೆ ರಜೆಯ ಅವಧಿ ಮಕ್ಕಳಿಗೆ ಸಾಮಾಜಿಕ ಶಿಕ್ಷಣದ ರೂಪದಲ್ಲಿ ಬಳಕೆಯಾಗುತ್ತಿತ್ತು. ಅದು ಬೆಲೆ ಕಟ್ಟಲಾಗದ ಕಲಿಕೆ. ಹಳ್ಳಿಯ ಚಿತ್ರಗಳು, ಕಳ್ಳುಬಳ್ಳಿ ಸಂಬಂಧಗಳ ಅರಿವು, ಕೃಷಿ ಸಂಸ್ಕೃತಿಯ ಪರಿಚಯ ಆಗುತ್ತಿದ್ದುದು ಆ ಸಮಯದಲ್ಲಿಯೇ. ಸಾಧ್ಯತೆ–ಸಂಭ್ರಮ ಈಗ ಉಳಿದಿದೆಯೆ?

ಮಕ್ಕಳ ನಾಳೆಗಳಿಗಾಗಿ ತಮ್ಮ ಇಂದಿನ ಸುಖವನ್ನು ತ್ಯಾಗ ಮಾಡುತ್ತಿರುವ ಅಮ್ಮ–ಅಪ್ಪಂದಿರು ನಮ್ಮ ನಡುವೆ ದೊಡ್ಡ ಸಂಖ್ಯೆಯಲ್ಲಿ ಕಾಣಸಿಗುತ್ತಾರೆ. ಕರುಳಕುಡಿಗಳ ಉಜ್ವಲ ಭವಿಷ್ಯವೇ ತಮ್ಮ ಜೀವನದ ಸಾರ್ಥಕತೆ ಎಂದು ಹೇಳುವ, ಅದರಂತೆ ನಡೆಯುವ ಪೋಷಕರೊಂದಿಗೆ, ಎಳೆಯರ ಹಿತದ ಬಗ್ಗೆ ಸಮಾಜವೂ ಸಹಾನುಭೂತಿಯಿಂದ ವರ್ತಿಸುತ್ತದೆ. ಹೀಗೆ, ಇಡೀ ಸಮಾಜ ಚಿಣ್ಣರ ಹಿತಾಸಕ್ತಿಯ ಬಗ್ಗೆ ಕಾಳಜಿ ವಹಿಸಿರುವ ಸಂದರ್ಭದಲ್ಲೂ ಮಕ್ಕಳ ಬಾಲ್ಯದ ಒಂದಷ್ಟು ಬಣ್ಣಗಳನ್ನು ನಾವು ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಕಸಿದುಕೊಂಡಿದ್ದೇವೆ. ಬೇಸಿಗೆ ರಜೆ, ಅಜ್ಜಿ ಮನೆ, ಹೊಲ ಹೊಳೆ ಬಯಲು – ಅಂಥ ಕೆಲವು ಸಂಭ್ರಮಗಳು.

ಪ್ರತಿ ವರ್ಷ ಮನೆಗೆ ಹೊಸ ಕ್ಯಾಲೆಂಡರ್ ಬಂದಾಗ, ಯುಗಾದಿ ಹಬ್ಬ ಯಾವಾಗ ಬಂದಿದೆ ಎಂದು ಮನೆಮಂದಿ ಕುತೂಹಲದಿಂದ ಗಮನಿಸುತ್ತಿದ್ದರು. ಯುಗಾದಿಯ ವೇಳೆಗೆ ಶಾಲೆಯ ಪರೀಕ್ಷೆ ಮುಗಿದಿರುತ್ತದೆಯೋ ಇಲ್ಲವೋ ಎನ್ನುವುದು ವಿದ್ಯಾರ್ಥಿಗಳ ಜೊತೆಗೆ ಪೋಷಕರಿಗೂ ಕಾಳಜಿಯ ವಿಷಯವಾಗಿರುತ್ತಿತ್ತು. ಪರೀಕ್ಷೆ ಮುಗಿದಿದ್ದರೆ ಹಬ್ಬವನ್ನು ಯಾವುದೇ ತಳಮಳವಿಲ್ಲದೆ ನಿರಾಳವಾಗಿ ಆಚರಿಸಬಹುದು; ಪರೀಕ್ಷೆಗೆ ಮೊದಲೇ ಯುಗಾದಿ ಬಂದರೆ ಹಬ್ಬವನ್ನು ಪೂರ್ಣ ಮನಸ್ಸಿನಿಂದ ಆಚರಿಸಲು ಆಗುವುದಿಲ್ಲ ಎನ್ನುವ ಲೆಕ್ಕಾಚಾರವದು. ಪರೀಕ್ಷೆಯ ಈ ಲೆಕ್ಕಾಚಾರ, ಯುಗಾದಿಯ ಸಂಭ್ರಮ ಈಗ ಕಳೆದುಹೋದ ದಿನಗಳ ಹಳಹಳಿಕೆಯಂತಾಗಿದೆ.

ಒಂದೆರಡು ದಶಕಗಳ ಹಿಂದೆಯಷ್ಟೇ, ಪರೀಕ್ಷೆಯ ನಂತರದ ಬೇಸಿಗೆ ರಜೆ ಮಜೆಯ ಕಾಲವಾಗಿರುತ್ತಿತ್ತು. ಸುಮಾರು ಎರಡು ತಿಂಗಳ ಕಾಲ ಓದು–ಬರಹಕ್ಕೆ ವಿರಾಮ ದೊರೆಯುತ್ತಿತ್ತು. ರಜೆ ಮುಗಿದು ವಾರವಾದರೂ ಶಾಲೆಗಳತ್ತ ಮುಖ ಹಾಕುವ ಮಕ್ಕಳ ಸಂಖ್ಯೆ ಕಡಿಮೆಯಿರುತ್ತಿತ್ತು. ಹಾಗೆಂದು ರಜೆಯ ಅವಧಿ ಮಕ್ಕಳನ್ನು ಶಿಕ್ಷಣದಿಂದ ವಿಮುಖಗೊಳಿಸುತ್ತಿತ್ತು ಎಂದರ್ಥವಲ್ಲ. ಬೇಸಿಗೆ ರಜೆಯ ಅವಧಿ ಮಕ್ಕಳಿಗೆ ಸಾಮಾಜಿಕ ಶಿಕ್ಷಣದ ರೂಪದಲ್ಲಿ ಬಳಕೆಯಾಗುತ್ತಿತ್ತು. ಅದು ಬೆಲೆ ಕಟ್ಟಲಾಗದ ಕಲಿಕೆ. ಹಳ್ಳಿಯ ಚಿತ್ರಗಳು, ಕಳ್ಳುಬಳ್ಳಿ ಸಂಬಂಧಗಳ ಅರಿವು, ಕೃಷಿ ಸಂಸ್ಕೃತಿಯ ಪರಿಚಯ ಆಗುತ್ತಿದ್ದುದು ಆ ಸಮಯದಲ್ಲಿಯೇ.


ಪರೀಕ್ಷೆ ಮುಗಿದು ಬೇಸಿಗೆ ರಜೆ ಆರಂಭವಾಗುವುದಕ್ಕೆ ಮಕ್ಕಳೊಂದಿಗೆ ದೊಡ್ಡವರೂ ಕಾದಿರುತ್ತಿದ್ದರು. ಮಕ್ಕಳೊಂದಿಗೆ ತವರಿಗೆ ಹೋಗುವ ಸಂಭ್ರಮ ಹೆಣ್ಣುಮಕ್ಕಳಿಗೆ. ಅಜ್ಜಿಯ ಮನೆ–ಮಡಿಲಿನಲ್ಲಿ ಮಕ್ಕಳಿಗೆ ಪಠ್ಯ ಚಟುವಟಿಕೆಗಳಿಂದ ಬಿಡುವು ದೊರೆತು, ಅಮ್ಮ–ಅಪ್ಪನ ಕಣ್ಣಸನ್ನೆಗಳಿಂದಲೂ ಸ್ವಾತಂತ್ರ್ಯ ದೊರೆಯುತ್ತಿತ್ತು. ಮಕ್ಕಳೊಂದಿಗೆ ಸೇರಿಕೊಂಡು ಊರು ಸುತ್ತುವುದು, ಊರ ಮುಂದಿನ ಬಯಲಿಯಲ್ಲಿ ದಣಿವಾಗುವವರೆಗೂ ಆಡುವುದು, ಹಿರಿಯರೊಂದಿಗೆ ಹೊಲಗದ್ದೆಗಳಿಗೆ ಹೋಗುವುದು, ಹೊಂಗೆ ನೆರಳಲ್ಲಿ ಬುತ್ತಿಯುಣ್ಣುವುದು, ಎಮ್ಮೆಯ ಮೇಲೆ ಸವಾರಿ ಮಾಡುವುದು, ಕಾಲುವೆ ನೀರಿನಲ್ಲಿ ಕಾಗದದ ದೋಣಿ ಬಿಡುವುದು, ಹಸಿತೆನೆಗಳ ಸುಟ್ಟು ತಿನ್ನುವುದು, ಮನೆಯ ಮುಂದೆ ಮಲಗಿ ಚುಕ್ಕಿಗಳನ್ನು ನೋಡುತ್ತಾ ಕಥೆ ಹೇಳುವಂತೆ ಅಜ್ಜನನ್ನೋ ಅಜ್ಜಿಯನ್ನೋ ಪೀಡಿಸುವುದು, ಮಾವು ಹಲಸುಗಳನ್ನು ಅಳತೆ ಮೀರಿ ತಿಂದು ಹೊಟ್ಟೆ ಕೆಡಿಸಿಕೊಳ್ಳುವುದು – ಹಳ್ಳಿಯ ಜೀವನಪ್ರೀತಿಯ ಚಿತ್ರಗಳು ಒಂದೇ ಎರಡೇ.

ಬೇಸಿಗೆ ದಿನಗಳಲ್ಲಿ ಊರಿನ ಕಲಾಸಕ್ತರಿಗೆ ಇನ್ನಿಲ್ಲದ ಹುರುಪು. ಸಂಜೆಗತ್ತಲು ದಟ್ಟವಾಗತೊಡಗಿತೆಂದರೆ ನಾಟಕದ ತಾಲೀಮು ಶುರುವಾಗುತ್ತಿತ್ತು. ಕೊನೆಗೊಂದು ದಿನ ಊರಿನ ಕೇಂದ್ರಸ್ಥಾನದಲ್ಲಿ ರಂಗಸ್ಥಲ ಎದ್ದುನಿಂತು, ನಾಟಕದ ಸಂಭ್ರಮ ಇಡೀ ಊರು ತುಂಬಿಕೊಳ್ಳುತ್ತಿತ್ತು. ನಾಟಕದ ಕಥೆಯ ಜೊತೆಗೆ, ಪಾತ್ರಧಾರಿಗಳ ಕುರಿತೂ ಕಥೆಗಳು ಹುಟ್ಟಿಕೊಳ್ಳುತ್ತಿದ್ದವು. ಮಕ್ಕಳಿಗೆ ಮಹಾಭಾರತ, ರಾಮಾಯಣದ ಪರಿಚಯ ಆಗುತ್ತಿದ್ದುದೇ ಈ ನಾಟಕಗಳಿಂದ. ಈ ಸಾಂಸ್ಕೃತಿಕ–ಸಾಮಾಜಿಕ ಸಂಭ್ರಮಕ್ಕೆ ಪರಿಷೆ–ರಥೋತ್ಸವಗಳೂ ಇಂಬು ನೀಡುತ್ತಿದ್ದವು.

ನಮ್ಮೆಲ್ಲರ ನೆನಪಿನ ಪುಟಗಳಲ್ಲಿನ ಬಾಲ್ಯದ ಈ ಚಿತ್ರಗಳು ಇಂದಿನ ಮಕ್ಕಳಿಗೆ ಎಷ್ಟರಮಟ್ಟಿಗೆ ದಕ್ಕುತ್ತಿವೆ ಎನ್ನುವ ಪ್ರಶ್ನೆಗೆ ಉತ್ತರ ದೊರಕಿಸಿಕೊಳ್ಳುವುದು ಕಷ್ಟ. ರಜೆ ಒಂದಷ್ಟು ಕಡಿತಗೊಂಡಿದ್ದರೂ 'ಬೇಸಿಗೆ ರಜೆ'ಯ ಸಂಪ್ರದಾಯ ಈಗಿನ ಶೈಕ್ಷಣಿಕ ವ್ಯವಸ್ಥೆಯಲ್ಲೂ ಇದೆ. ಅಜ್ಜಿಮನೆಯೂ ಇದೆ. ಬದಲಾಗಿರುವುದು ನಮ್ಮ ಜೀವನಶೈಲಿ ಹಾಗೂ ಬದುಕಿನ ಕುರಿತ ನಂಬಿಕೆಗಳು.

ಈಗ ರಜಾದಿನಗಳಲ್ಲಿ ಪ್ರವಾಸ ಹೋಗುವವರ ಸಂಖ್ಯೆ ಹೆಚ್ಚಾಗಿದೆ. ಮಕ್ಕಳು ಹಾಗೂ ಮನೆಮಂದಿ ಏಕತಾನತೆಯಿಂದ ಹೊರಬರಲು ಈ ಪ್ರವಾಸ ನೆರವಾಗುತ್ತದೆ. ಆದರೆ, ಈಗ ಊರು ಸುತ್ತುವುದರ ಕೇಂದ್ರದಲ್ಲಿರುವುದು ಮೋಜು. 'ದೇಶ ಸುತ್ತು ಕೋಶ ಓದು' ಎನ್ನುವ ಮಾತಿನ ಉದ್ದೇಶ ಅನುಭವ ಸಂಪಾದನೆಯಾಗಿತ್ತು. ಅನುಭವದ ಜಾಗದಲ್ಲೀಗ ಭೋಗ ಬಂದಿದೆ. ಊರು ಸುತ್ತುವುದರ ಉದ್ದೇಶ ಸುಖ ಎನ್ನುವಂತಾಗಿದೆ. ಆ ಕಾರಣದಿಂದಾಗಿಯೇ ಮನುಷ್ಯರ ಒಡನಾಟದ ಸಾಧ್ಯತೆಗಳ ಬದಲು, ಸವಲತ್ತುಗಳು ಮುಖ್ಯವೆನ್ನಿಸುತ್ತಿವೆ.

■ ರಘುನಾಥ ಚ.ಹ.



ಈಶ್ವರ್